# ಕರ್ನಾಟಕ ಲೋಕಾಯುಕ್ತ

ನಂ:ಕಂಪ್ಲೆಂಟ್/ಉಪಲೋಕ್/ಎಂವೈಎಸ್-1964/2015/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 06/06/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ಎಮ್. ಕಿರಣ್ ಕುಮಾರ್ ಹೆಗ್ಡೆ, ಪೆರ್ಮುಡೆ ಗುತ್ತು ಅಂಚೆ, ಗ್ರಾಮ ಮಾಳ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ಕಿರಣ್ ಕುಮಾರ್ ಹೆಗ್ಡೆ.ಎಮ್ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ಕಾರ್ಕಳ ತಾಲ್ಲೂಕಿನ ಮಾಳ ಗ್ರಾಮದ ಸರ್ವೇ ನಂಬರ್:96/1ಎ1ಎ ಸರ್ಕಾರಿ ಭೂಮಿಯಲ್ಲಿ ಅಕ್ರಮವಾಗಿ ಧಾರ್ಮಿಕ ಕೇಂದ್ರವನ್ನು ನಿರ್ವಹಿಸುತ್ತಿರುವ ಬಗ್ಗೆ ಮಾಳ ಗ್ರಾಮಸ್ಥರು ಉಡುಪಿ ಜಿಲ್ಲಾಧಿಕಾರಿಯವರಿಗೆ ವಿನಂತಿಸಿ ಅರ್ಜಿ ನೀಡಿದ್ದು, ಸದರಿ ಜಿಲ್ಲಾಧಿಕಾರಿಯವರು ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳುವಂತೆ ದಿ:06/08/2013ರ ಪತ್ರದ ಮುಖೇನ ಎದುರುದಾರರಾದ ಕಾರ್ಕಳದ ತಹಶೀಲ್ದಾರ್‌ರವರಿಗೆ ಸೂಚಿಸಿದ್ದು, ಎದುರುದಾರರು ಯಾವುದೇ ಕ್ರಮ ಜರುಗಿಸಿರವುದಿಲ್ಲ. ಮಾಳ ಗ್ರಾಮದ ಗ್ರಾಮ ಕರಣೀಕರು ಸ್ಥಳ ತನಿಖೆ ನಡೆಸಿ ಮಾಳ ಗ್ರಾಮದ ಸರ್ವೇ ನಂಬರ್ 96/1ಎ1ಎ ದಲ್ಲಿ ನಿರ್ಮಿಸುತ್ತಿದ್ದ ದೇವಸ್ಥಾನದ ಕಟ್ಟಡ ಕಾಮಗಾರಿಯನ್ನು ನಿಲ್ಲಿಸಿ ಎಚ್ಚರಿಕೆ ನೀಡಿರುವ ಬಗ್ಗೆ ವರದಿಯನ್ನು ಎನ್‌ಸಿಆರ್‌ಸಿಆರ್3,53,57/2013-14 ಕ್ಕೆ ಸಂಬಂಧಿಸಿದಂತೆ ವಿಎಐಆರ್-237/2013-14 ರಂತೆ ವರದಿ ಸಲ್ಲಿಸಿರುತ್ತಾರೆ. ಸದರಿ ಜಮೀನು ಸರ್ಕಾರಿ ಜಮೀನೆಂದು ದೃಢಪಟ್ಟಿದ್ದರೂ ಸಹ ಶ್ರೀ ಸುನೀಲ್ ಕುಮಾರ್ ಇಂದ್ರ ರವರು ಅಕ್ರಮವಾಗಿ ಧಾರ್ಮಿಕ ಕೇಂದ್ರವನ್ನು ನಿರ್ಮಿಸುತ್ತಿರುತ್ತಾರೆ. ಎರಡು ವರ್ಷಗಳಿಂದ ನಿರಂತರವಾಗಿ ಸರ್ಕಾರಿ ಭೂಮಿಯಲ್ಲಿ ನಡೆಯುತ್ತಿರುವ ಈ ಚಟುವಟಿಕೆ ಬಗ್ಗೆ ಕ್ರಮ ಕೈಗೊಳ್ಳುವಂತೆ ತಾವು ಕಟ್ಟಿರುವ ಕಟ್ಟಡವನ್ನು ತೆರವುಗೊಳಿಸಲು ಕ್ರಮ ಜರುಗಿಸುವಂತೆ ಕೋರಿದ್ದರೂ, ಎದುರುದಾರರು ಸಾರ್ವಜನಿಕ ಹಿತಾಸಕ್ತಿಯ ವಿರುದ್ಧವಾಗಿ ಸರ್ಕಾರದ ಸಂಪತ್ತನ್ನು ರಕ್ಷಿಸುವಲ್ಲಿ ವಿಫಲರಾಗಿರುತ್ತಾರೆ. ಆದುದರಿಂದ, ಎದುರುದಾರರ ವಿರುದ್ಧ ಕ್ರಮ ಜರುಗಿಸಿ ಸರ್ಕಾರಿ

ಜಮೀನನ್ನು ಉಳಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರು ಮಾಡಿರುವ ಆರೋಪಗಳ ಮೇಲಿನ ವಸ್ತುಸ್ಥಿತಿಯನ್ನು ಪರಿಶೀಲಿಸಲು ಕಂದಾಯ ನಿರೀಕ್ಷಕರನ್ನು ಮಾಳ ಗ್ರಾಮಕ್ಕೆ ಕಳುಹಿಸಿ ಸರ್ವೇ ನಂಬರ್ 96/1ಎ1ಎ ಯ ಹದ್ದುಬಸ್ತನ್ನು ಪರಿಶೀಲಿಸಲು ತಿಳಿಸಲಾಗಿದ್ದು, ಸದರಿ ಕಂದಾಯ ನಿರೀಕ್ಷಕರು ವರದಿಯನ್ನು ಸಲ್ಲಿಸಿ, ಸದರಿ ಜಮೀನಿಗೆ ಹದ್ದುಬಸ್ತನ್ನು ಗುರುತಿಸಲು ಕಷ್ಟಕರವೆಂದು, ಯಾವ ಜಾಗ ಸರ್ಕಾರಕ್ಕೆ ಸೇರಿದೆ, ಯಾವ ಜಾಗ ಪಟ್ಟಾ ಜಾಗವಾಗಿರುತ್ತದೆ ಎಂದು ನಿರ್ಧರಿಸುವುದು ಕಷ್ಟವಾಗಿರುತ್ತದೆ ಎಂದು ಆದ್ದರಿಂದ, ಈ ಬಗ್ಗೆ ಸರ್ವೇ ವರದಿಯನ್ನು ಪಡೆಯುವುದು ಸೂಕ್ತವೆಂದು ತಿಳಿಸಿರುತ್ತಾರೆ.

3. ಕಂದಾಯ ನಿರೀಕ್ಷಕರ ವರದಿಯಂತೆ ಕಾರ್ಕಳ ತಾಲ್ಲೂಕಿನ ಭೂಮಾಪಕರನ್ನು ಸರ್ವೇ ನಂಬರ್ 96/1ಎ1ಎ ಗೆ ಸಂಬಂಧಿಸಿದಂತೆ ವರದಿ ಹಾಗೂ ಸ್ಥಳ ನಕಾಶೆಯನ್ನು ತಯಾರಿಸಿ ನೀಡಲು ಸೂಚಿಸಲಾಗಿರುತ್ತದೆ. ಇದಲ್ಲದೇ, ಮಾಳ ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಯವರಿಗೆ ಶ್ರೀ ಸುನೀಲ್ ಕುಮಾರ್ ಇಂದ್ರಾ ಇವರು ಕಟ್ಟುತ್ತಿರುವ ದೇವಸ್ಥಾನವನ್ನು ಅಕ್ರಮವಾಗಿ ಕಟ್ಟಲಾಗಿರುತ್ತದೋ ಅಥವಾ ಇಲ್ಲವೋ ಎಂಬುದನ್ನು ಪರಿಶೀಲಿಸಿ ವರದಿ ಸಲ್ಲಿಸಲು ತಿಳಿಸಲಾಗಿತ್ತು. ಭೂಮಾಪಕರ ವರದಿಯಂತೆ ಶ್ರೀ ಸುನೀಲ್ ಕುಮಾರ್ ಇಂದ್ರ ಇವರು ಕಟ್ಟಿರುವ ದೇವಸ್ಥಾನವು ಅವರ ಪಟ್ಟಾ ಜಾಗದ ಒಳಗೆ ಇರುವುದಿಲ್ಲ. ಅವರ ಪಟ್ಟಾ ಜಾಗದಿಂದ ಹೊರಗೆ ಸರ್ಕಾರಿ ಜಮೀನಿನಲ್ಲಿ ಸಹ ಇರುತ್ತದೆ ಎಂದು ತಿಳಿಸಿರುತ್ತಾರೆಂದು, ಆದ್ದರಿಂದ, ತಾಲ್ಲೂಕು ಸರ್ವೆಯರ್ ನೀಡಿರುವ ವರದಿಯ ಆಧಾರದ ಮೇಲೆ ಶ್ರೀ ಸುನೀಲ್ ಕುಮಾರ್ ಇಂದ್ರ ಇವರಿಗೆ ನೋಟೀಸ್ ನೀಡಿ ಸದರಿ ದೇವಸ್ಥಾನವನ್ನು ತಮ್ಮ ಪಟ್ಟಾ ಜಾಗದಲ್ಲೇ ಕಟ್ಟಲಾಗಿರುತ್ತದೆ ಎಂದು ತೋರಿಸುವಂತೆ ತಿಳಿಸಲಾಗಿತ್ತೆಂದು, ಹಾಗೆಯೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಶ್ರೀ ಸುನೀಲ್ ಕುಮಾರ್ ಇಂದ್ರ ಇವರು ಕಟ್ಟಿರುವ ದೇವಸ್ಥಾನವು ಯಾವುದೇ ಕಾಲಕ್ಕೂ ದೂರುದಾರರಿಗೆ ಸೇರಿರುವುದಿಲ್ಲ. ದೂರುದಾರರು 2 ಎಕರೆ ಸರ್ಕಾರಿ ಜಮೀನನ್ನು ಅತಿಕ್ರಮಣ ಮಾಡಿದ್ದು, ಸದರಿ ಅತಿಕ್ರಮಣದ ಬಗ್ಗೆ ತಮ್ಮ ನ್ಯಾಯಾಲಯದಲ್ಲಿ ಪ್ರಕರಣ ವಿಲೇಗೆ ಬಾಕಿ ಇದೆ ಎಂದು ಇದಲ್ಲದೇ, ಸದರಿ ಜಾಗದ ಬಗ್ಗೆ ಸಿವಿಲ್ ನ್ಯಾಯಾಲಯದಲ್ಲಿ ಒಂದು ಸಿವಿಲ್ ಪ್ರಕರಣವು ಸಹ ವಿಲೇಗೆ

ಬಾಕಿ ಇರುತ್ತದೆ ಎಂದು ಅದರಲ್ಲಿ ಶ್ರೀ ಸುನೀಲ್ ಕುಮಾರ್ ಇಂದ್ರ ಹಾಗೂ ಈ ಪ್ರಕರಣದ ದೂರುದಾರರು ಪಾರ್ಟಿಗಳಾಗಿರುತ್ತಾರೆಂದು ತಿಳಿಸಿರುತ್ತಾರೆ.

4. ಈ ಹಂತದಲ್ಲಿ ಪ್ರಕರಣದ ತನಿಖೆಯನ್ನು ಉಡುಪಿ ಕರ್ನಾಟಕ ಲೋಕಾಯುಕ್ತ ಸಂಸ್ಥೆ ಆರಕ್ಷಕ ಉಪಾಧೀಕ್ಷಕರಿಗೆ ವಹಿಸಲಾಗಿದ್ದು, ಸದರಿಯವರು ತನಿಖಾ ವರದಿಯನ್ನು ಸಲ್ಲಿಸಿ ಮಾಳ ಗ್ರಾಮದ ಸರ್ವೇ ನಂಬರ್ 96/1ಎ1ಎ ಯ 0.01.50 ಎಕರೆಯಷ್ಟು ಜಾಗವನ್ನು ಶ್ರೀ ಸುನೀಲ್ ಕುಮಾರ್ ಇಂದ್ರ ಇವರು ಆಕ್ರಮಿಸಿ ದೇವಸ್ಥಾನವನ್ನು ಕಟ್ಟಿರುವುದು ಕಂಡು ಬಂದಿರುತ್ತದೆ ಎಂದು ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಯಾವುದೇ ಕ್ರಮ ಜರುಗಿಸಿಲ್ಲವೆಂದು, ಶ್ರೀ ಸುನೀಲ್ ಕುಮಾರ್ ಇಂದ್ರ ರವರು ಹೇಳಿಕೆ ನೀಡಿ ಸದರಿ ದೇವಸ್ಥಾನವನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ಕಟ್ಟಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ತಹಶೀಲ್ದಾರ್, ಕಾರ್ಕಳ ರವರು ಮಾಳ ಗ್ರಾಮ ಪಂಚಾಯತಿಗೆ ಸದರಿ ದೇವಸ್ಥಾನವನ್ನು ತಮ್ಮ ಸುಪರ್ದಿಗೆ ಪಡೆದು ಮುಂದಿನ ಆದೇಶದವರೆಗೂ ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 69 ರಂತೆ ಮಾಳ ಗ್ರಾಮ ಪಂಚಾಯತಿಯ ಅಧೀನಕ್ಕೆ ನೀಡಿ ಆದೇಶ ಮಾಡಿರುವುದು ಕಂಡು ಬಂದಿರುವುದಾಗಿ ತನಿಖಾಧಿಕಾರಿಯವರು ತಿಳಿಸಿರುತ್ತಾರೆ.

5. ತನಿಖಾಧಿಕಾರಿಯವರ ವರದಿಯ ಮೇರೆಗೆ ದೂರುದಾರರ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿ ಅದರಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎದುರುದಾರರು 2015ನೇ ಇಸವಿಯಿಂದ ಕೈಗೊಂಡ ಕ್ರಮದ ಬಗ್ಗೆ ಯಾವುದೇ ಮಾಹಿತಿಯನ್ನು ತಮ್ಮ ಆಕ್ಷೇಪಣೆಯಲ್ಲಿ ನೀಡಿರುವುದಿಲ್ಲ. ಶ್ರೀ ಸುನೀಲ್ ಕುಮಾರ್ ಇಂದ್ರ ಇವರು ಸರ್ಕಾರಿ ಜಮೀನನ್ನು ಆಕ್ರಮಿಸಿದ್ದು, ಗ್ರಾಮ ಕರಣೀಕರು ಅವರಿಗೆ ಎಚ್ಚರಿಕೆ ನೀಡಿದಾಗ ಇನ್ನೊಮ್ಮೆ ಆಕ್ರಮಣ ಮಾಡುವುದಿಲ್ಲವೆಂದು ಆಕ್ರಮಣಗೊಂಡಿರುವ ಜಾಗದಿಂದ ಕಲ್ಲುಗಳನ್ನು ತೆರವುಗೊಳಿಸುತ್ತೇನೆಂದು ಹೇಳಿಕೆ ನೀಡಿರುವುದಾಗಿ ಗ್ರಾಮ ಕರಣೀಕರು ಎಎಐಆರ್237/2013-14ರಂತೆ ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ. ಇದರಿಂದ ಗ್ರಾಮ ಕರಣೀಕರಿಂದ ಎದುರುದಾರರಾದ ಕಾರ್ಕಳ ತಹಶೀಲ್ದಾರ್‌ರವರಿಗೆ ಶ್ರೀ ಸುನೀಲ್ ಕುಮಾರ್ ಇಂದ್ರ ರವರ ಸರ್ಕಾರಿ ಜಮೀನನ್ನು ಅತಿಕ್ರಮಿಸಿರುವುದು ತಿಳಿದು ಬಂದಿರುತ್ತದೆ. ಆದಾಗ್ಯೂ ಶ್ರೀ ಸುನೀಲ್ ಕುಮಾರ್ ಇಂದ್ರ ಇವರು ದೂರು ನೀಡಿರುತ್ತಾರೆ ಎಂಬ ಕಾರಣಕ್ಕಾಗಿ ತನ್ನ ಮೇಲೆ (ಈ ಪ್ರಕರಣದ ದೂರುದಾರರ ಮೇಲೆ) ಎದುರುದಾರರು ನಿರಂತರವಾಗಿ ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿಕೊಂಡಿರುವುದಾಗಿ ನೋಟೀಸ್‌ಗಳನ್ನು ಜಾರಿಗೊಳಿಸಿ ತನ್ನ ಅಧಿಕಾರ ವ್ಯಾಪ್ತಿಯನ್ನು ಮೀರಿ ತನ್ನನ್ನು ಕ್ಷೋಭೆಗೆ ಒಳಪಡಿಸಿರುತ್ತಾರೆಂದು. ತಾನು ಸುಳ್ಳು ಆರೋಪಗಳಿಂದ ಮಾನಸಿಕವಾಗಿ ಜರ್ಜರಿತನಾಗಿರುತ್ತೇನೆಂದು ತಿಳಿಸಿರುತ್ತಾರೆ. ಅಸಲು ದಾವೆ ಸಂಖ್ಯೆ:93/2015ರ ಪ್ರಕರಣವು ದಿ:28/04/2015ರ ನಂತರದ

ಪ್ರಕರಣವಾಗಿರುತ್ತದೆ. ಇದಲ್ಲದೇ, ಶ್ರೀ ಸುನೀಲ್ ಕುಮಾರ್ ಇಂದ್ರ ಇವರು ತಮ್ಮ ಪತ್ನಿಯಾದ ಶ್ರೀಮತಿ ಜಯಶ್ರೀ ಇವರ ಹೆಸರಿನಲ್ಲಿ ಅತಿಕ್ರಮಿಸಿರುವ ಜಾಗವನ್ನು ಅಕ್ರಮ ಸಕ್ರಮದಡಿ ಸಕ್ರಮಗೊಳಿಸಬೇಕೆಂದು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಎಲ್ಲವನ್ನು ಪರಿಶೀಲಿಸಿದಲ್ಲಿ ಎದುರುದಾರರು ಪಕ್ಷಪಾತಿಯಾಗಿ ಕೆಲಸ ನಿರ್ವಹಿಸಿರುವುದು ಕಂಡು ಬರುತ್ತದೆ ಎಂದು ತಿಳಿಸಿರುತ್ತಾರೆ.

6. ದೂರಿನಂಶಗಳನ್ನು, ಎದುರುದಾರರು ಹಾಜರುಪಡಿಸಿರುವ ದಾಖಲೆಗಳನ್ನು ಹಾಗೂ ತನಿಖಾ ವರದಿಯನ್ನು ಮತ್ತು ಎದುರುದಾರರ ಆಕ್ಷೇಪಣೆಯನ್ನು ಪರಿಗಣಿಸಿದಲ್ಲಿ ಮಾಳ ಗ್ರಾಮದ ಸರ್ವೇ ನಂಬರ್ 96/1ಎ1ಎ ಯಲ್ಲಿ ಸರ್ಕಾರಿ ಜಮೀನನ್ನು ಅತಿಕ್ರಮಿಸಿ ಕಟ್ಟಡ ಕಟ್ಟಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಸದರಿ ಕಟ್ಟಡವು ಅನಧೀಕೃತ ಕಟ್ಟಡವೆಂದು ಸಹ ಸ್ಪಷ್ಟ ಪಟ್ಟಿರುತ್ತದೆ. ಇದಲ್ಲದೇ ದೂರುದಾರರು 2 ಎಕರೆ ಸರ್ಕಾರಿ ಜಮೀನನ್ನು ಅತಿಕ್ರಮಿಸಿರುವುದಾಗಿ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಿಳಿಸಿರುತ್ತಾರೆ ಹಾಗೂ ಸದರಿ ಜಾಗಕ್ಕೆ ಸಂಬಂಧಿಸಿದಂತೆ ಶ್ರೀ ಸುನೀಲ್ ಕುಮಾರ್ ಇಂದ್ರ ಹಾಗೂ ದೂರುದಾರರ ವಿರುದ್ಧ ಅಸಲು ದಾವೆ ಸಂ:93/2015 ವಿಲೇಗೆ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ ಎಂದು ಸಹ ಕಂಡು ಬರುತ್ತದೆಂದು ಉಭಯಪಕ್ಷದವರು ಒಪ್ಪಿದ ವಿಷಯವಾಗಿರುತ್ತದೆ. ಆದ್ದರಿಂದ, ಈ ಎಲ್ಲ ಅಂಶಗಳನ್ನು ಪರಿಗಣಿಸಿದಲ್ಲಿ ದೂರುದಾರರು ಹಾಗೂ ಶ್ರೀ ಸುನೀಲ್ ಕುಮಾರ್ ಇಂದ್ರ ಇವರು ಸರ್ಕಾರಿ ಜಮೀನನ್ನು ಅತಿಕ್ರಮಿಸಿರುವುದಾಗಿ ಕಂಡು ಬರುತ್ತದೆ (ಸರ್ವೇ ನಂಬರ್ 96/1ಎ1ಎ). ಅದೇ ರೀತಿ ಕಾರ್ಕಳ ತಹಶೀಲ್ದಾರ್‌ರವರು ದಿ:10/02/2016 ರಂದು ಈ ಸಂಸ್ಥೆಗೆ ಬರೆದಿರುವ ಪತ್ರದಲ್ಲಿ ಅಂತಿಮ ಪ್ಯಾರಾದಲ್ಲಿ ದೂರುದಾರರು ತಮ್ಮ ದೂರಿನಲ್ಲಿ ತಿಳಿಸಿರುವಂತೆ ಗುಡಿ ರಚನೆಯಾಗಿರುವ ಸ್ಥಳವು ಎಂದೂ ಅವರ ಸ್ವಾಧೀನಾನುಭವದಲ್ಲಿ ಇರಲಿಲ್ಲ. ದೂರುದಾರರು (ಶ್ರೀ ಕಿರಣ್ ಕುಮಾರ್) ಸಾಕಷ್ಟು ಜಮೀನು ಹೊಂದಿದ್ದರೂ ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿಕೊಂಡಿರುವುದು ಕಂಡು ಬರುತ್ತದೆ. ಇವರು 17.66 ಎಕರೆ ಪಟ್ಟ ಸ್ಥಳವನ್ನು ಹೊಂದಿದ್ದರೂ 2.00 ಎಕರೆ ಸರ್ಕಾರಿ ಜಮೀನನ್ನು ಅಕ್ರಮ ಸ್ವಾಧೀನ ಮಾಡಿದ್ದು, ಸದರಿ ಅಕ್ರಮ ಜಮೀನಿನ ನಕ್ಷೆ ತಯಾರಿಸಿ ಸಲ್ಲಿಸುವಂತೆ ತಾಲ್ಲೂಕು ಸರ್ವೇಯರ್‌ಗೆ ಸೂಚಿಸಲಾಗಿದೆ. ಈ ಕುರಿತು ನಡೆಸಲಾಗುತ್ತಿರುವ ವಿಚಾರಣೆಗೆ ದೂರುದಾರರು ಗೈರು ಹಾಜರಾಗುತ್ತಿರುತ್ತಾರೆ ಎಂದು ತಿಳಿಸಿರುವುದು ಕಂಡು ಬರುತ್ತದೆ. ಇದರಿಂದ ಸರ್ಕಾರಿ ಜಮೀನನ್ನು ದೂರುದಾರರು ಹಾಗೂ ಶ್ರೀ ಸುನೀಲ್ ಕುಮಾರ್ ಇಂದ್ರ ಇವರು ಒತ್ತುವರಿ ಮಾಡಿರುವುದಾಗಿ ಮೇಲ್ನೋಟಕ್ಕೆ ಕಂಡು ಬರುತ್ತದೆ.

7. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಮೇಲೆ ತಿಳಿಸಿದಂತೆ ಸರ್ಕಾರದ ಜಾಗವು**

ಅತಿಕ್ರಮಣವಾಗಿರುವುದಾಗಿ ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಸದರಿ ಅತಿಕ್ರಮಣವಾಗಿರುವ ಜಾಗದ ಮಿತಿಯನ್ನು ಭೂಮಾಪನ ಇಲಾಖೆಯಿಂದ ಅಳತೆ ಮಾಡಿಸಿ ನಿರ್ಧರಿಸಿಕೊಂಡು ನ್ಯಾಯಯುತವಾದ ರೀತಿಯಲ್ಲಿ, ಸದರಿ ಅತಿಕ್ರಮಿತ ಜಾಗವನ್ನು ಸರ್ಕಾರದ ಸುಪರ್ದಿಗೆ ಪಡೆಯಲು ಕ್ರಮ ಜರುಗಿಸುವಂತೆ, ಈ ಮೂಲಕ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಈ ಬಗ್ಗೆ ಎರಡು ತಿಂಗಳೊಳಗೆ ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳಯೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

6/6/13.

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ,
ಬೆಂಗಳೂರು. 6/6.